ಈ ಯೋಜನೆಯನ್ನು ದಿನಾಂಕ. 20/01/2015ರಿಂದ ಚಾಲನೆಗೊಳಿಸಲಾಗಿದ್ದು, ಈವರೆಗೆ 3 ಫಲಾನುಭವಿಗಳಿಗೆ ಚಿಕಿತ್ಸಾ ಸೌಲಭ್ಯ ಒದಗಿಸಲು ಪೂರ್ವಾನುಮತಿ ನೀಡಲಾಗಿದೆ.

ಈ ಯೋಜನೆಗೆ 2014–15ನೇ ಸಾಲಿನಲ್ಲಿ ₹. 10 ಕೋಟಿ ಅನುದಾನವನ್ನು ಒದಗಿಸಲಾಗಿದೆ. ಇದುವರೆಗೆ ಯಾವುದೇ ಬಿಲ್‌ಗಳ ಕ್ಲೇಮು ಸ್ವೀಕೃತವಾಗಿಲ್ಲ.

ಆ) ಈ ಯೋಜನೆ ಇತ್ತೀಚೆಗೆ ಜಾರಿಗೆ ಬಂದಿರುವುದರಿಂದ ಇದುವರೆಗೆ ಯಾವುದೇ ಲೋಪದೋಷಗಳು ಕಂಡುಬಂದಿರುವುದಿಲ್ಲ.

ಇ) ರಾಜ್ಯ ಸರ್ಕಾರಿ ನೌಕರರಿಗೆ ಜಾರಿಗೊಳಿಸಿರುವ "ಜ್ಯೋತಿ ಸಂಜೀವಿನಿ" ಯೋಜನೆಯ ಅನುಷ್ಠಾನದಲ್ಲಿನ ಸಾಧಕ–ಬಾಧಕಗಳನ್ನು ಪರಿಗಣಿಸಿ ಅದನ್ನು ನಿವೃತ್ತ ನೌಕರರಿಗೂ ಸಹ ವಿಸ್ತರಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೂತನ ಯೋಜನೆಗಳು

62 (112); ಶ್ರೀ ಹ್ಯಾರೀಸ್ .ಎನ್.ಎ. (ಶಾಂತಿನಗರ)

ಅ) ಬಿ.ಡಿ.ಎ. ಕಳೆದ ಮೂರು ವರ್ಷಗಳಲ್ಲಿ ಮಹಾನಗರದ ವಸತಿ ನಿವೇಶನ ಬೇಡಿಕೆಯನ್ನು ಪೂರೈಸಲು ಹಮ್ಮಿಕೊಂಡಿರುವ ಯೋಜನೆಗಳೇನು? (ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ ವಿವರ ನೀಡುವುದು).

ಆ) ಈಗಾಗಲೇ ಕೈಗೊಂಡಿದ್ದ ಬಡಾವಣೆಗಳ ನಿರ್ಮಾಣಕಾರ್ಯದ ವಿಳಂಬ ಮತ್ತು ಆ ಬಡಾವಣೆಗಳಿಗೆ ಪೂರ್ಣ ಪ್ರಮಾಣದಲ್ಲಿ ಮೂಲಸೌಕರ್ಯಗಳನ್ನು ಒದಗಿಸಿಕೊಡುವಲ್ಲಿ ಕೈಗೊಂಡ ಕ್ರಮಗಳೇನು; ಯಾವ ಯಾವ ಬಡಾವಣೆಗಳಲ್ಲಿ ಸದರಿ ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿದೆ. ಆ ಕುರಿತಾದ ಕ್ಷಿಪ್ರ ಕ್ರಮಗಳೇನು?

ಇ) ಈ ಬಡಾವಣೆಗೆ ಕುಡಿಯುವ ನೀರು ಪೂರೈಕೆಗಾಗಿ ಅನುಸರಿಸಿದ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಳೆದ ಮೂರು ವರ್ಷಗಳಲ್ಲಿ ಯಾವುದೇ ವಸತಿ ನಿವೇಶನ ಹಂಚಿಕೆ ಮಾಡಲು ಯೋಜನೆಗಳನ್ನು ಪ್ರಾರಂಭಿಸಿರುವುದಿಲ್ಲ ಹಾಗೂ ಕಳೆದ ಮೂರು ವರ್ಷಗಳಲ್ಲಿ ಯಾವುದೇ ವಸತಿ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ.

ಆ) ಈಗಾಗಲೇ ಕೈಗೊಂಡಿದ್ದ ಬಡಾವಣೆಗಳ ಪೈಕಿ **ಅಂಜನಾಪುರ ಬಡಾವಣೆಗೆ** ಈಗಾಗಲೇ ರಸ್ತೆ ಸಂಪರ್ಕ ಮತ್ತು ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ. **ಮುಂದುವರೆದ ಅಂಜನಾಪುರ ಬಡಾವಣೆಗೆ** ಈಗಾಗಲೇ ರಸ್ತೆ ಸಂಪರ್ಕ ಮತ್ತು ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ. ಒಳಚರಂಡಿ ವ್ಯವಸ್ಥೆಗಾಗಿ ಕೊಳಚೆ ನೀರು ಸಂಸ್ಕರಣಾ ಘಟಕ ಮತ್ತು ನೆಲಮಟ್ಟದ ನೀರು ಸಂಗ್ರಹಣಾ ತೊಟ್ಟಿ (GLSR) ಗಳನ್ನು ಬಡಾವಣೆಯಲ್ಲಿ ನಿರ್ಮಿಸಲು ಈಗಾಗಲೇ BWSSB ರವರಿಗೆ ಜಮೀನು ಹಸ್ತಾಂತರಿಸಲಾಗಿರುತ್ತದೆ. ಈ ಬಡಾವಣೆಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಹಾಗೂ ಕೊಳಚೆ ನೀರು ಸಂಸ್ಕರಣಾ ಘಟಕ ಸ್ಥಾಪಿಸಲು BWSSB ಯಿಂದ ಟೆಂಡರ್ ಕರೆಯಬೇಕಿದೆ. **ಮುಂದುವರೆದ ಬನಶಂಕರಿ 6 ನೇ ಹಂತದ ಬಡಾವಣೆಗೆ** ಈಗಾಗಲೇ ರಸ್ತೆ ಸಂಪರ್ಕ ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ.

ಸರ್ .ಎಂ. ವಿಶ್ವೇಶ್ವರಯ್ಯ ಬಡಾವಣೆಯ 1 ರಿಂದ 6 ನೇ ಬ್ಲಾಕ್ ಹಾಗೂ ಮುಂದುವರೆದ ಸರ್ .ಎಂ. ವಿಶ್ವೇಶ್ವರಯ್ಯ ಬಡಾವಣೆಯ 7 ರಿಂದ 9 ನೇ ಬ್ಲಾಕ್ ವ್ಯಾಪ್ತಿಯಲ್ಲಿ ನ್ಯಾಯಾಲಯದ ಪ್ರಕರಣಗಳಿಗೆ ಸಂಬಂಧಿಸಿದ ಜಮೀನುಗಳನ್ನು ಬಿಟ್ಟು ಉಳಿದ ಪ್ರದೇಶದಲ್ಲಿ ಈಗಾಗಲೇ ಶೇಕಡಾ 90 ರಷ್ಟು ರಸ್ತೆಗಳನ್ನು, ಒಳಚರಂಡಿ ಮತ್ತು ಮಳೆ ನೀರು ಚರಂಡಿಗಳನ್ನು ಪೂರ್ಣಗೊಳಿಸಲಾಗಿದೆ. ಸದರಿ ಬಡಾವಣೆಯ 1 ರಿಂದ 9 ನೇ ಬ್ಲಾಕ್ ವರೆಗೂ ವಿದ್ಯುತ್‌ಚ್ಛಕ್ತಿ ಸಂಪರ್ಕವನ್ನು ಒದಗಿಸುವ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಈ ಬಡಾವಣೆಯ ಕೆಲವು ಪ್ರದೇಶದಲ್ಲಿ ಜಮೀನಿನ ಮಾಲೀಕರು ನ್ಯಾಯಾಲಯದಲ್ಲಿ ಪ್ರಕರಣವನ್ನು

ದಾಖಲಿಸಿದ್ದು, ನ್ಯಾಯಾಲಯವು ಯಥಾಸ್ಥಿತಿ ಕಾಪಾಡುವಂತೆ ಆದೇಶ ನೀಡಿರುವ ಮೇರೆಗೆ ಅಂತಹ ಪ್ರದೇಶದಲ್ಲಿ ಮಾತ್ರ ಮೂಲಭೂತ ಸೌಲಭ್ಯ ಕಾಮಗಾರಿಗಳು ಬಾಕಿ ಇರುತ್ತದೆ.

ಅರ್ಕಾವತಿ ಬಡಾವಣೆಯ ಮರು ಅಭಿವೃದ್ಧಿ ಕಾಮಗಾರಿಯನ್ನು ಕಾರ್ಯಗತ ಮಾಡುತ್ತಿದ್ದು, ಈ ಬಡಾವಣೆ ರಚನೆಯ ಮೊದಲನೆ ಹಂತದ ಕಾಮಗಾರಿಯಲ್ಲಿ ಕಚ್ಚಾರಸ್ತೆ ನಿರ್ಮಾಣ ನಿವೇಶನಗಳ ವಿಂಗಡಣೆ ಮಾತ್ರ ಮಾಡಲಾಗುತ್ತಿದೆ. ಪ್ರಸ್ತುತ ಪ್ರಗತಿಯಲ್ಲಿರುವ ಮೊದಲನೆ ಹಂತದ ಕಾಮಗಾರಿಗಳು ಮುಕ್ತಾಯವಾದ ನಂತರ ಬಡಾವಣೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮಕೈಗೊಳ್ಳಲಾಗುವುದು.

ಇ) **ಅಂಜನಾಪುರ ಬಡಾವಣೆಯ** ನೀರು ಸರಬರಾಜು ವ್ಯವಸ್ಥೆಗಾಗಿ ಹಾಗೂ ಒಳಚರಂಡಿ ವ್ಯವಸ್ಥೆಗಾಗಿ BWSSB ರವರಿಂದ ಈಗಾಗಲೆ ಕೊಳವೆ ಮಾರ್ಗಗಳನ್ನು ಅಳವಡಿಸಲಾಗಿದ್ದು, ನೀರು ಸರಬರಾಜಿಗಾಗಿ ಮನೆಗಳಿಗೆ ಸಂಪರ್ಕ ನೀಡುವುದು ಮಾತ್ರ ಬಾಕಿ ಇರುತ್ತದೆ.

ಮುಂದುವರೆದ ಅಂಜನಾಪುರ ಬಡಾವಣೆಯ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು BWSSB ಯಿಂದ ಟೆಂಡರ್ ಕರೆದು ಕಾರ್ಯಾದೇಶ ನೀಡಲಾಗಿರುತ್ತದೆ. ನೆಲಮಟ್ಟದ ನೀರು ಸಂಗ್ರಹಣಾ ತೊಟ್ಟಿ (GLSR) ಗಳನ್ನು ಬಡಾವಣೆಯಲ್ಲಿ ನಿರ್ಮಿಸಲು ಈಗಾಗಲೇ BWSSB ರವರಿಗೆ ಜಮೀನು ಹಸ್ತಾಂತರಿಸಲಾಗಿರುತ್ತದೆ. **ಬನಶಂಕರಿ 6ನೇ ಹಂತದ ಬಡಾವಣೆಗೆ** ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಗಾಗಿ ಪ್ರಾಧಿಕಾರದ ವತಿಯಿಂದ ಕೊಳವೆ ಮಾರ್ಗಗಳನ್ನು ಅಳವಡಿಸಲಾಗಿದ್ದು, BWSSB ರವರಿಂದ ಚಾಲನೆ ನೀಡುವುದು ಮಾತ್ರ ಬಾಕಿ ಇರುತ್ತದೆ. ಈ ಬಡಾವಣೆಗೆ ನೀರು ಸರಬರಾಜು ಮಾಡಲು ನೀರಿನ ಶೇಖರಣಾಗಾರಗಳನ್ನು ನಿರ್ಮಿಸಲು ಸೂಕ್ತ ಜಾಗವನ್ನು ಈಗಾಗಲೇ ಪ್ರಾಧಿಕಾರದಿಂದ ಬೆಂಗಳೂರು ಜಲಮಂಡಳಿಗೆ ಹಸ್ತಾಂತರಿಸಲಾಗಿದೆ.

ಸದರಿ ಯೋಜನೆಗೆ BWSSB ರವರು ವಿಸ್ತೃತ ಯೋಜನಾ ವರದಿ ತಯಾರಿಸಿದ್ದು, ಅನುಮೋದನೆ ಹಂತದಲ್ಲಿದೆ.

ಮುಂದುವರೆದ ಬನಶಂಕರಿ 6ನೇ ಹಂತದ ಬಡಾವಣೆಗೆ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಸಲುವಾಗಿ ಯೋಜನಾ ವರದಿ ತಯಾರಿಸಲು ಪ್ರಾಧಿಕಾರದ ವತಿಯಿಂದ BWSSB ರವರಿಂದ ₹. 117.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಯೋಜನಾ ವರದಿ ಅನುಮೋದನೆ ಹಂತದಲ್ಲಿದೆ.

ಸರ್ .ಎಂ. ವಿಶ್ವೇಶ್ವರಯ್ಯ ಬಡಾವಣೆಯ ಕುಡಿಯುವ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಯ ಕಾಮಗಾರಿಗಳನ್ನು ಬೆಂಗಳೂರು ಜಲಮಂಡಳಿ ರವರಿಗೆ ವಹಿಸಲಾಗಿದ್ದು, ಶೇಕಡಾ 95 ರಷ್ಟು ಕಾಮಗಾರಿಗಳು ಪೂರ್ಣಗೊಂಡಿದ್ದು, ಕೊಳವೆ ಮಾರ್ಗದಿಂದ ನಿವೇಶನದಾರರಿಗೆ ಕುಡಿಯುವ ನೀರಿನ ನೇರ ಸಂಪರ್ಕ ಕಲ್ಪಿಸಲಾಗಿರುತ್ತದೆ. ಹಾಗೂ ನೀರು ಸರಬರಾಜು ಕೊಳವೆ ಸಂಪರ್ಕವನ್ನು ಪಡೆಯಲು ನಿಗಧಿತ ಶುಲ್ಕವನ್ನು ಜಲಮಂಡಳಿಗೆ ಪಾವತಿಸಿ ನೇರವಾಗಿ ನೀರು ಸಂಪರ್ಕ ಪಡೆಯಬಹುದೆಂದು ನೀವೇಶನದಾರರಿಗೆ ಈಗಾಗಲೇ ತಿಳಿಸಲಾಗಿದೆ. ಈ ಬಡಾವಣೆಯಲ್ಲಿ ನೆಲಮಟ್ಟದ ನೀರು ಸಂಗ್ರಹಣಾ ತೊಟ್ಟಿಯನ್ನು (GLSR) ನಿರ್ಮಿಸುವ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ವಿವಿಧ ವರ್ಗಗಳ ಖಾಲಿಯಿರುವ ಸಿಬ್ಬಂದಿಯನ್ನು ಭರ್ತಿ ಮಾಡುವುದು

63 (113); ಶ್ರೀ ಹ್ಯಾರಿಸ್ .ಎನ್.ಎ.

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಗಮ ಆಡಳಿತ ನಿರ್ವಹಣೆಗಾಗಿ ಮಂಜೂರಾದ ಮತ್ತು ಖಾಲಿ ಇರುವ ಸಿಬ್ಬಂದಿ ವರ್ಗಗಳ ಸಂಖ್ಯೆ ವಿವರಗಳೇನು;